# ಪ್ರತಿಭೆಗೆ ಜಾತಿಯಿಲ್ಲ

ಕಳೆದ ವಾರ ನನ್ನ ಗಮನಕ್ಕೆ ಬಂದ ಬದಲಾವಣೆಯ ಹರಿಕಾರರಂತೆ ಕಾಣುತ್ತಿರುವ ಇಬ್ಬರು ಹೆಣ್ಣುಮಕ್ಕಳ ಕುರಿತು ಬರೆಯಬೇಕೆನಿಸುತ್ತಿದೆ. ಮೊದಲನೆಯಾಕೆ ದೆಹಲಿಯ ಟೀನಾ ಧಾಬಿ, 2016ರ ಅಖಿಲ ಭಾರತ ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಮೊದಲ ಸ್ಥಾನ ಗಿಟ್ಟಿಸಿ ಇತಿಹಾಸ ಬರೆದವಳು. ಐಎಎಸ್ ಟಾಪರ್ ಆಗುವುದು ಅಸೀಮವಾದ ಸಾಧನೆ. ಅದನ್ನು ತನ್ನ 22ನೇ ವಯಸ್ಸಿಗೆ ಮುಡಿಗೇರಿಸಿಕೊಂಡ ಮೊದಲ ದಲಿತ ಮಹಿಳಾ ಅಭ್ಯರ್ಥಿ ಟೀನಾ. 1950ರಲ್ಲಿ ಪ್ರಾರಂಭವಾದ ಈ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇದುವರೆಗೂ ದಲಿತ ಅಭ್ಯರ್ಥಿಯೊಬ್ಬ ಸಾಧಿಸಲಾರದ್ದನ್ನು ಆಕೆ ಸಾಧಿಸಿ ಅಸಂಖ್ಯಾತ ದಲಿತ, ಹಿಂದುಳಿದ ಕೆಳಜಾತಿ ಯುವಕ ಯುವತಿಯರಿಗೆ ಮಾದರಿಯಾಗಿ ನಿಂತಳು. ಆಶ್ಚರ್ಯವೆಂದರೆ 1950ರ ಪ್ರಪ್ರಥಮ ನಾಗರಿಕ ಸೇವಾ ಸ್ಪರ್ಧಾತ್ಮಕ ಪರೀಕ್ಷೆಯ ಲಿಖಿತ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಅಭ್ಯರ್ಥಿ ಪುರುಷೋತ್ತಮ ದಾಸ್ ಎಂಬ ದಲಿತ. ಆದರೆ ಆತನನ್ನು ಮೌಖಿಕ ಪರೀಕ್ಷೆಯಲ್ಲಿ ಕಡಿಮೆ ಅಂಕ ಕೊಟ್ಟು ಕೊನೆಗೆ ತಳ್ಳಲಾಯಿತು. ಆಗಿನ ಪರಿಸ್ಥಿತಿಯಲ್ಲಿ ಮೀಸಲಾತಿ ಪಡೆಯುವ ಜಾತಿಗಳು ಸಾಮಾನ್ಯ ವರ್ಗಕ್ಕೆ ಏರುವುದು ದುಸ್ಸಾಧ್ಯವಾಗಿತ್ತು.

ಜಾತಿನಿಷ್ಠ ಭಾರತೀಯ ಸಂದರ್ಭದಲ್ಲಿ ಇದೊಂದು ಪವಾಡಸದೃಶ ಘಟನೆಯಾಗಿ ಕೆಲವರಿಗೆ ಕಾಣಿಸಿತು. ನಂಬಲು ಬಹಳ ಮಂದಿ ತಯಾರಿರಲಿಲ್ಲ. ಆಕೆಯ ತಳಬುಡವನ್ನೆಲ್ಲಾ ಹಿಡಿದು ಜಾಲಾಡಿದರು. ಮೀಸಲಾತಿಯಿಂದಲೇ ಸ್ಪರ್ಧೆಗೆ ಅವಕಾಶ ಗಿಟ್ಟಿಸಿದ್ದಾಳೆ ಎಂದು ಬರೆದರು. ಆಕೆ ಪಡೆದುಕೊಂಡ ಅಂಕಗಳ ಬಗ್ಗೆ ಚರ್ಚೆ ನಡೆಯಿತು. ಇಷ್ಟು ವರ್ಷಗಳು ಈ ತರಹದ ಚರ್ಚೆಯನ್ನು ಕೇಳಿರಲಿಲ್ಲ. ಇವೆಲ್ಲಕ್ಕೂ ಕಾರಣ ನಮ್ಮೊಳಗೆ ಬೇರುಬಿಟ್ಟಿರುವ ಪೂರ್ವಗ್ರಹಗಳು (**prejudices**). ಮತ್ತೂ ಮುಂದುವರೆದು ಹಿಂದುಳಿದವರ್ಗದವರೇ ಆದ ನನ್ನ ತರುಣ ಲೇಖಕ ಮಿತ್ರರೊಬ್ಬರು 'ಆಕೆ ಹಾಗೆ ಕಾಣುವುದಿಲ್ಲವಲ್ಲ' (ಅಂದರೆ ಬಾಹ್ಯ ಚರ್ಯೆಯಲ್ಲಿ) ಎಂದು ಮಾತಿಗೆಳೆದರು. ಉತ್ತರ ಭಾರತವನ್ನು ಆರ್ಯಭಾರತ ಎಂದೇ ಕರೆಯುತ್ತಾರೆ! ದಲಿತರು ಜನಾಂಗೀಯವಾಗಿ ಬೇರೆಯಲ್ಲ. ಜಾತಿಗಳ ಉಗಮ, ಸಂಕರ ಇತ್ಯಾದಿಗಳ ಬಗ್ಗೆ ಬಾಬಾಸಾಹೇಬರ ಬರೆಹಗಳನ್ನು ಗಮನಿಸಿ ಎಂದು ನಾನು ಅವರಿಗೆ ಹೇಳಬೇಕಾಯಿತು. ಇಂದಿಗೂ ಬೆಳ್ಳಗೆ ಕಾಣುವ, ಒಪ್ಪ ಉಡುಗೆ ತೊಡುವ, ಇಂಗ್ಲಿಷನ್ನು ಚೆನ್ನಾಗಿ ಮಾತಾಡುವ ದಲಿತ ವಿದ್ಯಾವಂತನ/ಳನ್ನು ಕಂಡರೆ ಹೊಟ್ಟೆಯೊಳಗೆ ಕೆಂಡ ಸುರಿದುಕೊಂಡು ನೋಡುವ ಪೂರ್ವಗ್ರಹಪೀಡಿತರು ಅನೇಕರಿದ್ದಾರೆ. ಟೀನಾ ಧಾಬಿ ತನ್ನ ನೆಲಮೂಲ ಅಸ್ಮಿತೆಯನ್ನು ಅಸ್ಖಲಿತವಾಗಿ ಘೋಷಿಸುತ್ತಾಳೆ. ಭೀಮರಾವ್ ಅಂಬೇಡ್ಕರ್ ನನ್ನ ಸ್ಫೂರ್ತಿ ಮತ್ತು ಆದರ್ಶ ಎಂದು ಹೇಳಲು ಮರೆಯುವುದಿಲ್ಲ.

ಮತ್ತೊಬ್ಬ ಹೆಣ್ಣುಮಗಳು 17 ವರ್ಷದ ಪಂಜಾಬಿನ ಪೋರಿ ಗಿನ್ನಿ ಮಾಹಿ. ಡೇಂಜರ್ ಚಮಾರ್ ಎಂಬ ಪಾಪ್ ಹಾಡಿನ ಮೂಲಕ ಜನಪ್ರಿಯತೆ ಗಳಿಸುತ್ತಿರುವ ದಲಿತ ಯುವ ಗಾಯಕಿ. ಈಕೆಯ ಹಿನ್ನೆಲೆ ಚೇತೋಹಾರಿಯಾಗಿದೆ. ಇಷ್ಟು ಚಿಕ್ಕ ವಯಸ್ಸಿಗೆ ದಕ್ಕಿದ, ಈ ದೇಶದ ಯಾವುದೇ ದಲಿತ ಮಹಿಳೆಗೆ ಸಿಗಬಹುದಾದ ಒಂದು ಸಾಮಾನ್ಯ ಅನುಭವ ಅದು. ಜಾತಿ ಪ್ರಶ್ನೆ ಸೂಕ್ಷ್ಮಮತಿಗಳನ್ನು ಹೇಗೆ ಘಾಸಿಗೊಳಿಸಬಹುದೆನ್ನುವುದಕ್ಕೆ ಈಕೆ ಸಾಕ್ಷಿ ಆಗಿದ್ದಾಳೆ. ಕಾಲೇಜು ಸೇರಿದಾಗ ಸಹಪಾಠಿಯೊಬ್ಬಳು 'ನೀನು ಯಾವ ಜಾತಿ' ಎಂದು ಕೇಳಿದ್ದಾಳೆ. ಗಿನ್ನಿ 'ನಾನು ಚಮಾರ್ ಜಾತಿಗೆ ಸೇರಿದವಳು' ಎಂದು ಉತ್ತರಿಸಿದ್ದಾಳೆ. ಸಹಪಾಠಿ ಅಷ್ಟಕ್ಕೆ ಸುಮ್ಮನಾಗಿದ್ದರೆ ಗಿನ್ನಿ ಮಾಹಿ ಅಲ್ಲೇ ಇರುತ್ತಿದ್ದಳು... ಮುಂದುವರೆದು 'ಓ! ಚಮಾರ್ ಡೇಂಜರ್ ಅಂತೆ, ನಾನು ಹುಷಾರಾಗಿರಬೇಕು' ಎಂದು ಮುಗ್ಧವಾಗಿಯೆ ಹೇಳಿದ್ದಾಳಾಕೆ. ಗಿನ್ನಿಗೆ ಆಘಾತವಾಯಿತು ಎಂದರೆ ಕಡಿಮೆಯೆ, ಪದಗಳು ಸೋಲುತ್ತವೆ. ಎಳೆಯ ಮನಸ್ಸಿಗದು ವಜ್ರಾಘಾತ, ಕತ್ತಲಲ್ಲಿ ಪ್ರಪಾತಕ್ಕೆ ನೂಕಿದ ಅನುಭವ. ತನ್ನ ಏಳನೇ ವಯಸ್ಸಿಗೆ ಹಾಡಲು ಕಲಿತಿದ್ದ ಗಿನ್ನಿ 'ಡೇಂಜರ್ ಚಮಾರ್' (ಅಪಾಯಕಾರಿ ಚಮ್ಮಾರ) ಎಂಬ ಹಾಡು ಕಟ್ಟಿದಳು. ಆಗಲೇ ಅಸ್ತಿತ್ವದಲ್ಲಿದ್ದ 'ಚಮಾರ್ ಪಾಪ್' ತಂಡದಲ್ಲಿ ಹಾಡಿದಳು. ದಿನಬೆಳಗಾಗುವುದರಲ್ಲಿ ಹೊಳೆಯುವ ನಕ್ಷತ್ರವಾದಳು. ಈಕೆಯೂ ಬೆಳ್ಳಗಿದ್ದಾಳೆ, ಇಂಗ್ಲಿಷ್ ಕಲಿಯುತ್ತಿದ್ದಾಳೆ, ಪಿಎಚ್.ಡಿ ಮಾಡುವ ಹಂಬಲವಿದೆಯಂತೆ. ಈಕೆಯ ತಂದೆ ಇವಳಿಗೆ ಭಾರತಿ ಎಂದು ಹೆಸರಿಟ್ಟಿದ್ದಾರೆ. ಕಾರಣ ಕೇಳಿದರೆ, ಬಾಬಾಸಾಹೇಬರು ಹೇಳಿದ 'ನನಗೆ ಭಾರತವೆ ಮೊದಲು ಮತ್ತು ಅಂತಿಮ' ಎಂಬ ಮಾತನ್ನು ಉಲ್ಲೇಖಿಸುತ್ತಾರೆ. ಎಷ್ಟೇ ಬಡವನಾಗಲಿ, ಅವಮಾನಿತನಾಗಲಿ, ಶೋಷಿತರಲ್ಲಿ ಶೋಷಿತನಾಗಿರಲಿ ಮಣ್ಣಿನ ಋಣವನ್ನು ಬಲ್ಲವನಿಗೆ ದೇಶಭಕ್ತಿಯ ಪಾಠ ಬೇಕಿಲ್ಲವೆನಿಸುತ್ತದೆ.

ಭಾರತದ ರಾಜ್ಯಗಳಲ್ಲಿ ಅತಿ ಹೆಚ್ಚು ಪರಿಶಿಷ್ಟರಿರುವುದು ಪಂಜಾಬ್ ರಾಜ್ಯದಲ್ಲಿ. ಜನಸಂಖ್ಯೆಯ ಶೇ.32 ರಷ್ಟು. ಅವರೆಲ್ಲರೂ ಗುರುಗೋವಿಂದ್ ಸಿಂಗ್‌ರ ಅನುಯಾಯಿಗಳೆ, ಸಿಕ್ಖರೆ. ಆದರೆ ಇವರನ್ನು ಸವರ್ಣ ಜಾತಿಮೂಲದ ಸಿಕ್ಖರು ಒಪ್ಪಿಕೊಳ್ಳುವುದಿಲ್ಲ. ತಮ್ಮ ಗುರುದ್ವಾರಗಳಿಗೆ ಬಿಟ್ಟುಕೊಳ್ಳುವುದಿಲ್ಲ. ಧರ್ಮ ಒಂದೇ ಆದರೂ ಜಾತಿಯಿಂದ ಅವರನ್ನು ಕಟ್ಟುನಿಟ್ಟಾಗಿ ಪ್ರತ್ಯೇಕಿಸಲಾಗಿದೆ. ಇಂಗ್ಲೆಂಡಿಗೆ ವಲಸೆ ಹೋದವರೂ ಸಹ ಬೇರೆಬೇರೆ ಗುರುದ್ವಾರಗಳನ್ನು ಕಟ್ಟಿಕೊಂಡಿದ್ದಾರೆ. ಆದ್ದರಿಂದ ಇತ್ತೀಚೆಗೆ ದಲಿತ ಸಿಕ್ಖರು 'ರವಿದಾಸಿಯಾ' ಎಂದು ಕರೆದುಕೊಳ್ಳುತ್ತಿದ್ದಾರೆ. ಜಾತಿ, ಧರ್ಮವನ್ನು ಹೇಗೆ ನೇರ ಸೀಳಬಲ್ಲದು ಎಂಬುದಕ್ಕೆ ಇದು ಉದಾಹರಣೆ. 'ಚಮಾರ್ ಪಾಪ್' ಮತ್ತು 'ಅಂಬೇಡ್ಕರ್ ಫೋಕ್' ಎಂಬ ಎರಡು ಸಂಗೀತ ತಂಡಗಳು ಪಂಜಾಬ್ ಮತ್ತು ಉತ್ತರ ಭಾರತದಲ್ಲಿ ತಮ್ಮ ಸಾಂಸ್ಕೃತಿಕ ಚಹರೆಯನ್ನು ಅಚ್ಚೊತ್ತುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಅವುಗಳ ಪ್ರಸ್ತುತಿ ಹೆಚ್ಚು.

ಸುಶಿಕ್ಷಿತ ಮಧ್ಯಮವರ್ಗದ ಕುಟುಂಬದಿಂದ ಬಂದ ಟೀನಾ ಧಾಬಿ ಮತ್ತು ಮೊದಲ ತಲೆಮಾರಿನ ಗಿನ್ನಿ ಮಾಹಿ ಶೋಷಿತರ ಕಣ್ಣು ತೆರೆಸುವ ಕುಡಿಗಳಾಗಿ ಬೆಳೆಯುತ್ತಿರುವುದು ಆಶಾದಾಯಕವಾಗಿದೆ. ಇದೇ ಸಂದರ್ಭದಲ್ಲಿ ವಿಧಾನಸೌಧದಲ್ಲಿರುವ ಹಿರಿಯ ದಲಿತ ಅಧಿಕಾರಿಯೊಬ್ಬರು 'ವಾಸ್ತು' ಸರಿಯಿಲ್ಲವೆಂದು ತಮ್ಮ ಕೊಠಡಿಯ ಬಾಗಿಲ ದಿಕ್ಕನ್ನು ಬದಲಿಸುತ್ತಿರುವುದು ಸುದ್ದಿಯಾಗುತ್ತಿದೆ. ಸಂವಿಧಾನಬದ್ಧ ಹುದ್ದೆಯನ್ನು ಅಲಂಕರಿಸಿ ಅದರ ಆಶಯಗಳಲ್ಲೊಂದಾದ ವೈಜ್ಞಾನಿಕ ಮನೋಭಾವವನ್ನು ತಮ್ಮ ಸೇವಾವಧಿಯುದ್ದಕ್ಕೂ ಬೆಳೆಸಿಕೊಳ್ಳಲಾರದ ಇವರು ಮುಂದಿನ ಪೀಳಿಗೆಗೆ ನೀಡುವ ಸಂದೇಶವಾದರೂ ಏನು ಎಂಬುದನ್ನು ನೆನೆಸಿಕೊಂಡರೆ ದುಃಖವಾಗುತ್ತದೆ.

■ ಮೂಚಿ

## ಮಾತೇ ಮುತ್ತು

★ ನೀವು ಏನೇ ಮಾಡಿದರೂ, ಅದು ಶ್ರೇಷ್ಠ ಸಾಧನೆ ಆಗಬೇಕಿದ್ದರೆ ಅದನ್ನು ಪ್ರೀತಿಸಿ ಹಾಗೂ ಅದಕ್ಕಾಗಿ ತ್ಯಾಗ ಮಾಡಿ.

—ಮಾಯಾ ಏಂಜೆಲೊ

★ ಜೀವನ ಸೈಕಲ್ ಸವಾರಿಯಂತೆ. ಸಮತೋಲನ ಉಳಿಸಬೇಕಿದ್ದರೆ ಮುಂದೆ ಸಾಗುತ್ತಲೇ ಇರಬೇಕು.

—ಆಲ್ಬರ್ಟ್ ಐನ್‌ಸ್ಟೀನ್

★ ಎಷ್ಟು ಕೆಲಸ ಮಾಡುತ್ತೇವೆ ಎನ್ನುವುದು ಮುಖ್ಯವಲ್ಲ, ಆ ಕೆಲಸದಲ್ಲಿ ಎಷ್ಟು ಪ್ರೀತಿ ತುಂಬಿದ್ದೇವೆ ಎನ್ನುವುದು ಮುಖ್ಯ.

—ಮದರ್ ತೆರೆಸಾ

★ ಶಿಕ್ಷಣ ಎನ್ನುವುದು ಸಮೃದ್ಧಿಯಲ್ಲಿ ಆಭರಣ ಇದ್ದಂತೆ. ಪ್ರತಿಕೂಲ ಸಂದರ್ಭದಲ್ಲಿ ಆಶ್ರಯತಾಣದಂತೆ.

—ಅರಿಸ್ಟಾಟಲ್

★ ನಿಮ್ಮನ್ನು ನೀವು ಕಂಡುಕೊಳ್ಳಲು ಅತ್ಯುತ್ತಮ ವಿಧಾನವೆಂದರೆ, ಇತರರ ಸೇವೆಯಲ್ಲಿ ಕಳೆದುಹೋಗುವುದು.

—ಮಹಾತ್ಮಾ ಗಾಂಧಿ

★ ನಿದ್ರೆಗಿಂತ ದೊಡ್ಡ ಧ್ಯಾನ ಇನ್ನೊಂದಿಲ್ಲ.

—ದಲೈ ಲಾಮಾ

★ ಪ್ರೀತಿಸುವ ಗುಣ ಇಲ್ಲದವನು ನೈಜ ಕ್ರಾಂತಿಕಾರಿ ಆಗಲಾರ.

—ಚೆ ಗವಾರ

★ ಪ್ರಯೋಗಕ್ಕೆ ಒಳಪಡಿಸದಿದ್ದರೆ ಜ್ಞಾನಕ್ಕೆ ಬೆಲೆಯಿಲ್ಲ.

—ಆ್ಯಂಟನ್ ಚೆಕಾಫ್

★ ಅಪಾಯವೇ ಎದುರಾಗುವುದು ಬೇಡ ಎಂದು ಪ್ರಾರ್ಥಿಸದಿರಿ. ಸವಾಲೊಡ್ಡುವ ಅಪಾಯಗಳನ್ನು ಎದುರಿಸುವ ಧೈರ್ಯಕ್ಕಾಗಿ ಪ್ರಾರ್ಥಿಸಿ.

—ರವೀಂದ್ರನಾಥ ಟ್ಯಾಗೋರ್